ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಅವ್ಯವಹಾರ

22(62): ಶ್ರೀ ಜಯಚಂದ್ರ ಟಿ.ಬಿ.(ಶಿರಾ): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದವರು ದಿ.8-9-2009 ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಉಪ ಸಮಿತಿಯ ಮೂಲಕ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ಮಾನದಂಡದ ಆಧಾರದ ಮೇಲೆ ನಿವೇಶನ ಹಂಚಿಕೆ ಮಾಡಲಾಗಿದೆ?

ಇ) ಪ್ರಾಧಿಕಾರದ ಉಪ ಸಮಿತಿಯ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಾಧಿಕಾರದ ನೌಕರರು ಹಾಗೂ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರದ ನಿಯಮಾವಳಿಯಲ್ಲಿ ಅವಕಾಶವಿದೆಯೇ?

ಈ) ಪ್ರಾಧಿಕಾರದ ಆರ್ಥಿಕ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ನಿಮ್ಮ ಆಯ್ಕೆ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಸ್ಥಳೀಯ ಪ್ರಾಧಿಕಾರಕ್ಕೆ ಅಧಿಕಾರವಿದೆಯೇ ಹಾಗೂ ಈ ಯೋಜನೆಯಡಿಯಲ್ಲಿ ಎಷ್ಟು ನಿವೇಶನ ಹಂಚಿಕೆ ಮಾಡಲಾಗಿದೆ?

ಉ) ಈ ನಿವೇಶನ ಹಂಚಿಕೆಯಿಂದ ಪ್ರಾಧಿಕಾರಕ್ಕೆ ಸಂದಾಯವಾಗಿರುವ ಆದಾಯ ಎಷ್ಟು ಹಾಗೂ ಅನುಸರಿಸಿರುವ ಮಾನದಂಡವೇನು ನಿಮ್ಮ ಆಯ್ಕೆ ಎಂಬ ಯೋಜನೆ ಅಸ್ತಿತ್ವದಲ್ಲಿದೆಯೇ?

ಊ) ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ನಿರ್ಣಯದಂತೆ ನಿವೇಶನ ಹಂಚಿಕೆ ಮಾಡಲು ಸಾರ್ವಜನಿಕ ತಿಳುವಳಿಕೆಗೆ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರದ ನಿಯಮಾವಳಿಗಳನ್ನು ಪಾಲಿಸಲಾಗಿದೆಯೇ? (ಪತ್ರಿಕೆಗಳ ಹೆಸರು ಮತ್ತು ದಿನಾಂಕ ಸಂಪೂರ್ಣ ವಿವರ ನೀಡುವುದು);

ಋ) ಜಾಹೀರಾತಿನಲ್ಲಿ ನಮೂದಿಸಿದಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ಮೊದಲೇ ಪ್ರಾಧಿಕಾರವು ಅನೇಕ ನಿವೇಶನಗಳನ್ನು ಹಂಚಿಕೆ ಮಾಡಿ ಸೋಂದಾಯಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಎ) ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮವೇನು?

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ಬಂದಿದೆ.

ಆ) ನಿಯಮಗಳ ಉಲ್ಲಂಘನೆಯಾಗಿದೆ.

ಇ) ಇದೆ, ಆದರೆ ಅರ್ಜಿದಾರರು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991 ರನ್ವಯ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

ಈ) ಹೌದು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರಂತೆ ಪ್ರಾಧಿಕಾರವು ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದು. ಈ ಯೋಜನೆಯಲ್ಲಿ 408 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಉ) ನಿವೇಶನ ಹಂಚಿಕೆಯಿಂದ ಪ್ರಾಧಿಕಾರಕ್ಕೆ ರೂ.644.40 ಲಕ್ಷಗಳು ಸಂದಾಯವಾಗಿದೆ. ಮಂಡ್ಯ ಪ್ರಾಧಿಕಾರದ ನಿರ್ಣಯದ ಪ್ರಕಾರ ನಿಮ್ಮ ಆಯ್ಕೆ ಎಂಬ ಯೋಜನೆಯನ್ನು ಅನುಸರಿಸಿ, ಹಂಚಿಕೆ ಮಾಡಲಾಗಿದೆ. ಪ್ರಾಧಿಕಾರವು ಮಾಡಿಕೊಂಡ ಯೋಜನೆಯಾದ್ದರಿಂದ ಇದು ಅಸ್ಥಿತ್ವದಲ್ಲಿ ಇರುವುದಿಲ್ಲ.

ಊ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991 ರ ಉಪ ನಿಯಮ 2ರ, 3ನೆಯರನ್ವಯ ನಗರದಲ್ಲಿ ಪ್ರಚಾರದಲ್ಲಿರುವ ದೈನಂದಿನ ಸ್ಥಳೀಯ ಪತ್ರಿಕೆಗಳಾದ ಸುದ್ದಿ ಸಂಘರ್ಷ, ಸ್ಟಾರ್ ಆಫ್ ಮಂಡ್ಯ ಮತ್ತು ಎಂ. ಟಿ. ಎನ್. (ಮೀಡಿಯಾ) ದಲ್ಲಿ ದಿನಾಂಕ:17-09-2009 ರಂದು ಪ್ರಕಟಣೆ ಹೊರಡಿಸಲಾಗಿದೆ.

ಋ) ಬಂದಿದೆ.

ಎ) ಸರ್ಕಾರದ ಗಮನಕ್ಕೆ ಬಂದ ನಂತರ, ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಕೂಲಂಕುಷವಾಗಿ ತನಿಖೆ ನಡೆಸಿ ಸಮಗ್ರವಾದ ತಪಾಸಣಾ ವರದಿಯನ್ನು ನೀಡಲು ತಿಳಿಸಿದೆ. ಜೊತೆಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ತಂಡವೊಂದನ್ನು ರಚಿಸಿ,

ಪರಿವೀಕ್ಷಿಸಿ ವರದಿಮಾಡಲು ತಿಳಿಸಲಾಗಿತ್ತು. ಮಂಡ್ಯ ಜಿಲ್ಲಾಧಿಕಾರಿಗಳು ದಿನಾಂಕ: 06-1-11 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆಧರಿಸಿ ಸಧ್ಯಕ್ಕೆ ಸರ್ಕಾರದಿಂದ ತಪ್ಪಿತಸ್ಥರುಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ. ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ನಗರದ ರಸ್ತೆಗಳ ಸುಂದರೀಕರಣ

23(176): ಶ್ರೀ ಸಿ.ಬಿ.ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೆಬ್ಬಾಳ ಮೇಲುಸೇತುವೆಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ರಸ್ತೆಯ ಮಧ್ಯಭಾಗದಲ್ಲಿ ಕೈಗೆತ್ತಿಕೊಂಡಿರುವ ಸುಂದರೀಕರಣ (ಗಿಡ, ಹುಲ್ಲುಹಾಸು, ಗೊಂಬೆಗಳು) ಕಾಮಗಾರಿಗೆ ಕಳೆದ 2 ವರ್ಷಗಳಿಂದ ಈ ವರೆಗೆ ವೆಚ್ಚ ಮಾಡಿರುವ ಹಣವೆಷ್ಟು?

ಆ) ಇದನ್ನು ಒಂದೇ ಕಾಮಗಾರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಯಾವ ಅವಧಿಯಲ್ಲಿ ಯಾವ ಕಾಮಗಾರಿಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ?

ಈ) ಗಿಡ, ಹುಲ್ಲು, ಇತ್ಯಾದಿಗಳನ್ನು ಎಷ್ಟು ಅವಧಿಗೆ ಕಾಯ್ದುಕೊಳ್ಳಬೇಕಾದ ಜವಾಬ್ದಾರಿ ಗುತ್ತಿಗೆದಾರರ ಮೇಲಿದೆ;

ಉ) ಗುತ್ತಿಗೆ ಷರತ್ತುಗಳ ಪ್ರಕಾರ ನೋಡಿಕೊಳ್ಳಲಾಗಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಮಧ್ಯ ಭಾಗದ ಜಾಗದಲ್ಲಿ ಸೌಂದರ್ಯೀಕರಣಗೊಳಿಸುವ ಕಾಮಗಾರಿಗಳಿಗಾಗಿ (ಗಿಡ, ಹುಲ್ಲುಹಾಸು, ಗೊಂಬೆಗಳು) ಸೇರಿದಂತೆ ಬೋರ್‌ವೆಲ್, ಪೈಪ್‌ಲೈನ್ ಮತ್ತು ಹನಿ ನೀರಾವರಿಗಾಗಿ ಹಾಗೂ ನೀರಿನ ಕಾರಂಜಿ & ಅಲಂಕಾರಿಕ ಶಿಲ್ಪಕಲಾ ಕೃತಿಗಳ ಅಳವಡಿಕೆಗಾಗಿ 2008-09ನೇ ಸಾಲಿನಲ್ಲಿ ಒಟ್ಟು ರೂ.295.36 ಲಕ್ಷಗಳನ್ನು ವೆಚ್ಚ ಮಾಡಿ ಅಭಿವೃದ್ಧಿ ಪಡಿಸಲಾಗಿದೆ.

2009-10ನೇ ಸಾಲಿನಲ್ಲಿ ಇದರ ನಿರ್ವಹಣೆಗಾಗಿ ರೂ. 10.35 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಹಾಗೂ 2010-11ನೇ ಸಾಲಿಗೆ ರೂ. 10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಆ) ಇಲ್ಲ.